ಕಡೂರು ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಜಮೀನಿನ ವಿಸ್ತೀರ್ಣ.

೨೦೪೫. ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಡೂರು ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣ ಎಷ್ಟು ?

ಆ) ಇದನ್ನು ಸಾಗುವಳಿದಾರರಿಗೆ ಖಾಯಂ ಮಾಡಲು ಜಪ್ತು ಕಾಲಾವಕಾಶ ಬೇಕಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ದಿನಾಂಕ ೧-೧-೧೯೮೮ರವರೆಗೆ ೧೨,೮೮೩-೨೩ (ಹನ್ನೆರಡು ಸಾವಿರದ ಎಂಟು ನೂರು ಎಂಬತ್ತೂರು ಎಕರೆ ಇಪ್ಪತ್ತೂರು ಗುಂಟೆ) ವಿಸ್ತೀರ್ಣದಲ್ಲಿ ಬಗರ್ ಹುಕುಂ ಸಾಗುವಳಿಯಾಗಿರುತ್ತದೆ.

ಆ) ಬಗರ್ ಹುಕುಂ ಸಾಗುವಳಿಗಳನ್ನು ಭೂ ಕಂದಾಯ ಕಾಯಿದೆಗೆ ತಂದಿರುವ ಕರಡಿ ಮಸೂದೆ ಪಾಸಾದ ನಂತರ ಆ ಪ್ರಕಾರ ಅರ್ಹತೆ ಹೊಂದಿದ ಎಲ್ಲಾ ಪ್ರಕರಣಗಳನ್ನು ಕ್ರಮಬದ್ಧ ಗೊಳಿಸಲು ಕ್ರಮ ಜರುಗಿಸಲಾಗುವುದು.

ಶಿವಮೊಗ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಭೂರಹಿತರ ಸಂಖ್ಯೆ.

೧೯೮೪. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಮಾಡಲಾದ ಭೂರಹಿತರ ಸಂಖ್ಯೆ ಎಷ್ಟು ? ಹಾಗೂ ಸಾಗುವಳಿ ಮಾಡಿರುವ ಭೂಮಿ ಎಷ್ಟು ?

ಆ) ಬಗರ್‌ಹುಕ್ಕುಂ ಭೂಮಿಯ ಬಗ್ಗೆ ತೀರ್ಮಾನ ಕೊಡಲು ಸರ್ಕಾರದವರು ರಚಿಸಿದ ಸಮಿತಿಗಳಾವುವು ?

(ಜಿಲ್ಲಾವಾರು ಮತ್ತು ತಾಲ್ಲೂಕುವಾರು ಹೆಸರು ಮತ್ತು ವಿಳಾಸಗಳ ವಿವರ ನೀಡುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಬಗರ್‌ಹುಕ್ಕುಂ ಮಾಡಲಾದ ಭೂರಹಿತರ ಸಂಖ್ಯೆ ೬೯೦೯ ಮತ್ತು ವಿಸ್ತೀರ್ಣ ೧೨.೦೬೦ ಎಕರೆ ೩೭ ಗುಂಟೆ

ಆ) ಯಾವುದೂ ಇಲ್ಲಾ

ರಾಜ್ಯದ ಮುಜರಾಯಿ ಇಲಾಖೆಯಲ್ಲಿನ ದಿನಗೂಲಿ ನೌಕರರ ಬಗ್ಗೆ.

೧೯೧೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖನಿಜ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಮುಜರಾಯಿ ಇಲಾಖೆಯಲ್ಲಿರುವ ದಿನಗೂಲಿ ನೌಕರರ ಸಂಖ್ಯೆಯೆಷ್ಟು ?

ಆ) ಆ ನೌಕರರು ಕೆಲಸ ಮಾಡುತ್ತಿರುವ ಸ್ಥಳ ಹಾಗೂ ಪಡೆಯುತ್ತಿರುವ ವೇತನವೆಷ್ಟು ?

ಇ) ಸದರಿ ನೌಕರರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಕೆ. ಅಮರನಾಥ ಶೆಟ್ಟಿ (ಮಂಜರಾಯಿ ರಾಜ್ಯ ಸಚಿವರು).—

ಅ) ಒಂದು.

ಆ) ಬೆಳಗಾವಿ ಸಹಾಯಕ ದತ್ತಿ ಆಯುಕ್ತರ ಕಚೇರಿಯಲ್ಲಿ ಶೀಘ್ರಲಿಪಿಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ದಿನವೊಂದಕ್ಕೆ ರೂ. ೨೪-೮೦ರಂತೆ ವೇತನ ಪಡೆಯುತ್ತಿದ್ದಾರೆ.

ಇ) ರಾಜ್ಯದ ದಿನಗೂಲಿ ನೌಕರರನ್ನು ಖಾಯಂ ಆಗಿ ವಿಲೀನಗೊಳಿಸುವ ಬಗ್ಗೆ ಕರ್ನಾಟಕ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳು.

೨೦೯೮ ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಒಟ್ಟು ನೋಂದಣಿಯಾದ ನಿರುದ್ಯೋಗಿಗಳ ಸಂಖ್ಯೆ ಎಷ್ಟು ? ಕೇಂದ್ರವಾರು ವಿವರ ನೀಡುವುದು)

ಇ) ನೋಂದಣಿಯಾದ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಸರ್ಕಾರದವರು ಅನುಸರಿಸುತ್ತಿರುವ ನಿಯಮಗಳೇನು ?

ಈ) ಈ ವರ್ಷ ಉದ್ಯೋಗ ಒದಗಿಸಲಾಗಿರುವವರ ಸಂಖ್ಯೆ ಎಷ್ಟು ? ಆ ಪೈಕಿ ಬಡತನದ ರೇಖೆಯಿಂದ ಕೆಳಗಿರುವ ಸಾಮಾನ್ಯರು ಪರಿಶಿಷ್ಟ ವರ್ಗದವರು ಮತ್ತು ಅಲ್ಪಸಂಖ್ಯಾತರ ಸಂಖ್ಯೆ ಎಷ್ಟು ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ೩೨ ಉದ್ಯೋಗ ವಿನಿಮಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ದಿನಾಂಕ ೩೧-೩-೧೯೮೯ರವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ ೯,೯೦,೨೭೬. ಕೇಂದ್ರವಾರು ವಿವರವನ್ನು ಅನುಬಂಧ-Iರಲ್ಲಿ ನೀಡಲಾಗಿದೆ.

ಇ) ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿರುವ ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶನಾಲಯ, ನವದೆಹಲಿ ಇವರು ರಚಿಸಿರುವ 'ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿ' ಯಲ್ಲಿ ನೀಡಿರುವ ಸೂಚನೆಗಳ ಪ್ರಕಾರ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿ ಕೊಂಡಿರುವ ಅಭ್ಯರ್ಥಿಗಳನ್ನು ನಿಯೋಜಕರ ಬೇಡಿಕೆ ಅನ್ವಯ ಹುದ್ದೆಗೆ ನಿಗಧಿಪಡಿಸಿರತಕ್ಕ ವಿದ್ಯಾರ್ಹತೆ, ವಯೋಮಿತಿ ಅನುಭವ ಮೀಸಲಾತಿ ಇವೇ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಅಭ್ಯರ್ಥಿಗಳ ನೋಂದಣಿ ಜೇಷ್ಠತೆಯ ಆಧಾರದ ಮೇರೆಗೆ ಆಯ್ಕೆ ಮಾಡಿ ಸಂದರ್ಶನಕ್ಕೆ ಪುರಸ್ಕರಿಸಲಾಗುತ್ತಿದೆ.

ಈ) ಈ ವರ್ಷ ಅಂದರೆ ದಿನಾಂಕ ೧-೪-೮೯ರಿಂದ ೩೧-೩-೯೦ರವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮುಖಾಂತರ ೯೮೨೨ ಮಾಹಿತಿಯನ್ನೂ ಸೇರಿದಂತೆ ಒಟ್ಟು ೮,೩೭೧ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿ ಕೊಡಲಾಗಿದೆ. ಇವರುಗಳ ಪೈಕಿ ೩೭೬ ಪರಿಶಿಷ್ಟ ವರ್ಗ, ೧,೬೩೮ ಪರಿಶಿಷ್ಟ ಜಾತಿ, ೪೮೯ ಅಲ್ಪಸಂಖ್ಯಾತ ಅಭ್ಯರ್ಥಿಗಳು ಆಗಿರುತ್ತಾರೆ.

ಉದ್ಯೋಗ ಪಡೆದಂತ ಉದ್ಯೋಗಾರ್ಥಿಗಳ ಪೈಕಿ ಬಡತನದ ರೇಖೆಯಿಂದ ಕೆಳಗಿರುವ ಸಾಮಾನ್ಯರು ಎಷ್ಟು ಎಂಬ ಮಾಹಿತಿ ಲಭ್ಯವಿಲ್ಲ.